ಜಿಲ್ಲಾ ಪಂಚಾಯತ ಬೆಳಗಾವಿ

ಟೆಲಿಫ್ಯಾಕ್ಸ:0831-2407294

ಯೋಜನಾ ವ್ಯವಸ್ಥಾಪಕರ ಕಾರ್ಯಾಲಯ,
ನಿರ್ಮಲ ಭಾರತ ಅಭಿಯಾನ,
ಜಿಲ್ಲಾ ನೆರವು ಘಟಕ,
ಜಿಲ್ಲಾ ಪಂಚಾಯತ, ಬೆಳಗಾವಿ.
Email:tscbgm@gmail.com

**ವಿಷಯ: ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದಡಿ ವೈಯಕ್ತಿಕ ಶೌಚಾಲಯಗಳ ಪ್ರೋತ್ಸಾಹ ಧನ ಬಿಡುಗಡೆ ಮಾಡುವ ಕುರಿತು.**

**ಓದಲಾಗಿದೆ:1)ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದ ಹೊಸ ಮಾರ್ಗಸೂಚಿ ಜುಲೈ-2012.**

**2)ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/ರಾನೀನೈಮಿ/ನಿಭಾಅ/502012-13 ದಿನಾಂಕ:25-10-2013.**

**3)ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕ ಪಂಚಾಯತ ಬೆಳಗಾವಿ, ಗೋಕಾಕ, ಸವದತ್ತಿ ಇವರ ಬೇಡಿಕೆ ಪತ್ರಗಳು**

****

**ಪ್ರಸ್ತಾವನೆ:**

ಓದಲಾದ (2) ರ ಸರ್ಕಾರದ ಆದೇಶದಲ್ಲಿ ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.180.00 ಲಕ್ಷಗಳನ್ನು ಬೆಳಗಾವಿ ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ. ಉಲ್ಲೇಖ (3) ರ ಪತ್ರಗಳಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕ ಪಂಚಾಯತ, ಬೆಳಗಾವಿ, ಗೋಕಾಕ ಹಾಗೂ ಸವದತ್ತಿ ಇವರು ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡ ಫಲಾನುಭವಿಗಳಿಗೆ ಪ್ರೋತ್ಸಾಹ ಧನ ಸಂದಾಯ ಮಾಡಲು ಅನುದಾನ ಬಿಡುಗಡೆ ಮಾಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿ ಪ್ರಸ್ತುತ ಲಭ್ಯವಿರುವ ಅನುದಾನದಲ್ಲಿ ಬೆಳಗಾವಿ, ಗೋಕಾಕ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡ ಫಲಾನುಭವಿಗಳಿಗೆ ಪ್ರೋತ್ಸಾಹ ಧನ ಸಂದಾಯ ಮಾಡಲು ಈ ಕೆಳಗಿನಂತೆ ನಿಬಂಧನೆಗಳಿಗೊಳಪಟ್ಟು ಅನುದಾನವನ್ನು ತಾಲ್ಲೂಕು ನೀರು ಮತ್ತು ನೈರ್ಮಲ್ಯ ಸಮಿತಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

**ಆದೇಶ ಸಂ.ಜಿಪಂಬೆ.ನಿಭಾಅ/ವಿವ/17/05-06** **ದಿನಾಂಕ:17/02/2014.**

## ಆ ದೇ ಶ

ಮೇಲ್ಕಾಣಿಸಿದ ಪ್ರಸ್ತಾವನೆಯಲ್ಲಿಯ ಅಂಶಗಳನ್ನು ಪರಿಶೀಲಿಸಿ ಬೆಳಗಾವಿ, ಗೋಕಾಕ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡ ಫಲಾನುಭವಿಗಳಿಗೆ ಪ್ರೋತ್ಸಾಹ ಧನ ಸಂದಾಯ ಮಾಡಲು ಈ ಕೆಳಗಿನಂತೆ ಷರತ್ತುಗಳಿಗೊಳಪಟ್ಟು ಅನುದಾನವನ್ನು ತಾಲ್ಲೂಕು ನೀರು ಮತ್ತು ನೈರ್ಮಲ್ಯ ಸಮಿತಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

| ಕ್ರಸಂ | ತಾಲ್ಲೂಕು | ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಬೆಳಗಾವಿ | 20.00 |
| 2 | ಗೋಕಾಕ | 50.00 |
| 3 | ಸವದತ್ತಿ | 20.00 |
| | **ಒಟ್ಟು** | **90.00** |

***ನಿಬಂಧನೆಗಳು:***

1)ನಿರ್ಮಲ ಭಾರತ ಅಭಿಯಾನ ಯೋಜನೆಯಡಿ ಮಾರ್ಗಸೂಚಿ ಪ್ರಕಾರ ಪ್ರೋತ್ಸಾಹಧನವನ್ನು ಫಲಾನುಭವಿಗಳಿಗೆ ಶೌಚಾಲಯ ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ಶೌಚಾಲಯದ ಜೊತೆಗೆ ಫಲಾನುಭವಿಯ ಛಾಯಾಚಿತ್ರ ಹಾಗೂ ಫಲಾನುಭವಿ ಇದ್ದ ಬಗ್ಗೆ ದೃಢೀಕೃತ ಪ್ರಮಾಣ ಪತ್ರ ಹಾಗೂ ಫಲಾನುಭವಿಯ ಬೇಡಿಕೆ ಅರ್ಜಿಯನ್ನು ಪಡೆದ ನಂತರ ಸಂದಾಯ ಮಾಡತಕ್ಕದ್ದು.

2)ವೈಯಕ್ತಿಕ ಶೌಚಾಲಯದ ಮೇಲೆ ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮದಡಿ ನಿರ್ಮಿಸಿದ ಬಗ್ಗೆ ನಾಮ ಫಲಕವನ್ನು ಬರೆಯಿಸತಕ್ಕದ್ದು.

3)ಯಾವುದೇ ಕಾಮಗಾರಿ ಪುನರಾವರ್ತನೆಯಾಗದಂತೆ ನೋಡಿಕೊಳ್ಳುವುದು.

4)ಈ ಅನುದಾನದ ಬಳಕೆಯನ್ನು ನಿರ್ಮಲ ಭಾರತ ಅಭಿಯಾನ ಯೋಜನೆಯ ಮಾರ್ಗದರ್ಶಿ ಸೂತ್ರಗಳಡಿ ತಿಳಿಸಲಾಗಿರುವ ನಿಬಂಧನೆ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರ ಕಾಲ ಕಾಲಕ್ಕೆ ಹೊರಡಿಸಲಾಗಿರುವ ಆದೇಶ/ಸೂಚನೆಗಳನ್ವಯ ಭರಿಸತಕ್ಕದ್ದು.

5)ಈಗ ಬಿಡುಗಡೆ ಮಾಡಿರುವ ಅನುದಾನವನ್ನು ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಲು ಮಾತ್ರ ವೆಚ್ಚ ಮಾಡತಕ್ಕದ್ದು.

6)ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಿ ಆ ಗ್ರಾಮ ಪಂಚಾಯತಿಯನ್ನು ಬಯಲು ಮಲವಿಸರ್ಜನೆ ಮುಕ್ತವನ್ನಾಗಿ ಮಾಡಿ ನಿರ್ಮಲ ಗ್ರಾಮ ಪುರಸ್ಕಾರಕ್ಕಿರುವ ಎಲ್ಲ ಮಾನದಂಡಗಳನ್ನು ಪೂರ್ಣಗೊಳಿಸತಕ್ಕದ್ದು.

7)**ನಿರ್ಮಲ ಭಾರತ ಅಭಿಯಾನದ ವೆಬ್‌ಸೈಟ್‌ನಲ್ಲಿ ಫಲಾನುಭವಿಗಳ ಹೆಸರನ್ನು ದಾಖಲಿಸಿದ ನಂತರ ಪಿ.ಡಿ.ಓ. ರವರು ಪ್ರೋತ್ಸಾಹಧನದ ಚೆಕ್ ನೀಡುವುದು ಹಾಗೂ ಪ್ರತಿ ತಿಂಗಳು ಪ್ರಗತಿ ವರದಿಯನ್ನು ಫಲಾನುಭವಿಗಳ ಯಾದಿಯೊಂದಿಗೆ ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.**

8)ಶೌಚಾಲಯಗಳ ಗುಣಮಟ್ಟ ಹಾಗೂ ವ್ಯವಸ್ಥೆ ಸಮರ್ಪಕವಾಗಿ ಇರುವಂತೆ ನೋಡಿಕೊಳ್ಳತಕ್ಕದ್ದು. ಚಾಲ್ತಿ ಪಾರದರ್ಶಕ ನಿಯಮಗಳನ್ನು ಪಾಲಿಸತಕ್ಕದ್ದು.

9)ಫಲಾನುಭವಿಗಳು ವೈಯಕ್ತಿಕ ಶೌಚಾಲಯಗಳನ್ನು ಸದ್ಬಳಕೆ ಮಾಡಿಕೊಳ್ಳತಕ್ಕದ್ದು.

10)ಬಳಕೆ ಪ್ರಮಾಣ ಪತ್ರವನ್ನು ಈ ಕಾರ್ಯಾಲಯಕ್ಕೆ ಸಲ್ಲಿಸುವುದು.

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ, ಬೆಳಗಾವಿ ಇವರು ಬಿಡುಗಡೆ ಮಾಡಿದ ಅನುದಾನವನ್ನು ಸಂಬಂಧಿಸಿದ ತಾಲ್ಲೂಕು ನೀರು ಮತ್ತು ನೈರ್ಮಲ್ಯ ಸಮಿತಿ, ಇವರ ಖಾತೆಗೆ ಬಿಡುಗಡೆ ಮಾಡಲು ಆದೇಶಿಸಿದೆ.

(ದೀಪ ಚೋಳನ್)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ.

ಪ್ರತಿಯನ್ನು:ಮಾನ್ಯ ನಿರ್ದೇಶಕರು, ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಕಾವೇರಿ ಭವನ, ಬೆಂಗಳೂರು ಇವರಿಗೆ ಮಹಿತಿಗಾಗಿ ಸಲ್ಲಿಸಿದೆ.

**<u>ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.</u>**

1) ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ, ಬೆಳಗಾವಿ ಇವರಿಗೆ.
2) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ, ಬೆಳಗಾವಿ, ಗೋಕಾಕ, ಸವದತ್ತಿ ಇವರಿಗೆ.
3) ಪ್ರತಿಯನ್ನು ಜಿಲ್ಲೆಯ ಎಲ್ಲಾ ಸಮಾಲೋಚಕರುಗಳಿಗೆ ಮಾಹಿತಿಗಾಗಿ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಬೆಳಗಾವಿ.